ಮೈಸೂರ ಗೆಜೆಟ್.

ಸಂ: 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 28.

ಬೆಂಗಳೂರು, ಗುರುವಾರ, ಜುಲೈ ತಾ॥ 14, ಸ್ ೧೯೦೪.

IIನ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಕೊಡೋಕಾದ ಇಸ್ತಿಹಾರ್‌ನಾಮೆಗಳು...

ವಿದ್ಯಾಭ್ಯಾಸದ ಇಲಾಖೆ.

ಡಿಸೆಂಬ್ಲರು 1ನೆಯ ಪ್ರಕಟನ ಪತ್ರಿಕೆ, ಸ್ ೧೯೦೪ನೆಯ ಇಸವಿ ಜುಲೈ ತಾರೀಖು 2.

ಸ್ ೧೯೦೫ನೆಯ ಇಸವಿ ನವಂಬರ್ ತಿಂಗಳಲ್ಲಿ ನಡೆವ ಮೈಸೂರು ದೇಶೀಯ ಪರೀಕ್ಷೆಗಳು.

ಸ್ ೧೯೦೪ನೆ ಇಸವಿ ಜನವರಿ 9ನೆ ತಾರೀಖಿನ ಡಿಸೆಂಬರು 28ನೆ ಪ್ರಕಟನ ಪತ್ರಿಕೆಯಲ್ಲಿ ಕಂಡ ಸ್ ೧೯೦೫ನೆ ಇಸವಿಯಲ್ಲಿ ನಡೆವ ದೇಶೀಯ ಪರೀಕ್ಷೆಗಳಿಗೆ ನಿಯಮಿಸಲ್ಪಟ್ಟಿರುವ ಭಾಷಾಗ್ರಂಥಗಳಿಂದ ಇದರಲ್ಲಿ ಕಂಡ ಭಾಗಗಳು ತೆಗೆದುಹಾಕಲ್ಪಟ್ಟಿರುತ್ತವೆ.

ಸ್ ೧೯೦೫ನೆ ಇಸವಿಯಲ್ಲಿ ನಡೆವ ಲೋವರ್ ಸೆಕೆಂಡರಿ ಪರೀಕ್ಷೆ.

"ನಿನಜ್ಜಿ-ಉರ್ಮ" ಇಂದ "ಮುಂತಕೆ-ಇಸ್ತಿಕ್ಬಾರಿ" ತೆಗೆದುಹಾಕಲ್ಪಟ್ಟಿರುತ್ತದೆ.

ಸ್ ೧೯೦೫ನೆ ಇಸವಿಯಲ್ಲಿ ನಡೆವ ಅಪ್ಪರ್ ಸೆಕೆಂಡರಿ ಪರೀಕ್ಷೆ.

"ಕಿಸ್ಸನಾಮ" ಇಂದ "ಅರಾಬಿಕ್ ಪದ್ಯಗಳು ಮತ್ತು ಫಾರಸಿ ಪದ್ಯಗಳು (ಕಾಸಿದಾಸ್)"—ಪುಸ್ತಕದ ಅಂತ್ಯದಲ್ಲಿರುವಂ ಫಾದ್ದು—ತೆಗೆದುಹಾಕಲ್ಪಟ್ಟಿರುತ್ತದೆ.

ಹೆಚ್. ಜಿ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖೆ.

ತಾರೀಖು 6ನೆ ಜುಲೈ 1904, ಚಿಕ್ಕಮಗಳೂರು.

ಇದರಿಂದ ತಿಳಿಸುವದೇನಂದರೆ :—ಕಡೂರು ಡಿವಿಸ್ಯಕ್ಕು ಫಾರೆಸ್ಟು ಆಫಿಸರವರ ಆಫೀಸಿನಲ್ಲಿ ಈ ಕೆಳಗೆ ಕಂಡ ತಪಶೀಲ್ ಮೇರೆ ಸಂಬಳ ಮತ್ತು ಭತ್ಯ ವೊಬಲಗು ಸಹ ಪಾವತಿ ಆಗದೆ ಬಾಕೀಲಿ ಇರುತ್ತೆ. ಈ ನೋಟೀಸು ಪ್ರಾಯಿಷ್ ಆದ ಮೂರು ತಿಂಗಳೊಳಗಾಗಿ ಬಾಧ್ಯತೆ ಇರತಕ್ಕವರು ಕಡೂರು ಡಿವಿಸ್ಯಕ್ಕು ಫಾರೆಸ್ಟು ಆಫಿಸರವರ ರೂಬರೂ ಯು ಹಾಜರಾಗಿ ವೊಬಲಗು ಪಡಿಯತಕ್ಕು. ಹಾಗೆ ಇಲ್ಲದ ಪಕ್ಷದಲ್ಲಿ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ :—

ನಂಬರು.	ಹೆಸರು.	ಹುದ್ದೆ.	ತಪಶೀಲ್.				ಷರಾ.
			ಸಂಬಳ &c.	ವೊಬಲಗು.			
1	ರಂಗ	ಗಾರ್ಡ್	1901ನೆ ಏಪ್ರೆಲ್ ತಲಬು	3	6	5	
2	ವೈಲಾರೈಯ್ಯ	ಡಿಟೋ	ಡಿಟೋ ಮಾರ್ಚ್ ತಲಬು	1	14	1	
3	ನಾಗಾ	ಡಿಟೋ	ಡಿಟೋ ಜುಲೈ ತಲಬು	1	7	3	
4	ಲಿಂಗಂಣ	ಡಿಟೋ	1902ನೆ ಮೇ ತಲಬು	1	12	11	
5	ಪುಸುರ್ಮಾಸಾಬ್	ಡಿಟೋ	ಡಿಟೋ ಮೇ ತಲಬು	0	14	5	
6	ಹನುಮಂತರಾವ್	ಫಾರೆಸ್ಟರು	1901ನೆ ಆಗಸ್ಟು, ಸೆಪ್ಟಂಬರ್ ಭತ್ಯ	5	12	0	
			ಡಿಟೋ - ಅಕ್ಟೋಬರ್ ತಲಬು	14	0	0	
			ಸಾದಿಲ್ವಾರ್ ವೊಬಲಗು	0	13	0	
			ಜಮ್ಮಾ	30	0	1	

ನೋಟಿಸ.

ತಾರೀಖು 7ನೆ ಜುಲೈ 1904ನೆ ಇಸವಿ.

1900ನೆ ಇಸವಿ ಫಾರೆಸ್ಟ್ ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ ಈ ಕೆಳಗೆ ನಮೂದಿರುವ ಕ್ರೀಶ್ಚನ್ನೆ ನಾಟೂ ಮಕ್ತಿಕೊಪ್ಪದ ಹೊಳೆಯಲ್ಲಿ ತೇಲಿಕೊಂಡು ಬಂದದ್ದು ಕೊಪ್ಪ ರೇಂಜು ಆಫಿಸರವರ ಸುಪರ್ದಿನಲ್ಲಿರುತ್ತೆ. ಇದರ ಹಕ್ಕುದಾರ್ರು ಯಾರಾದರೂ ಇದ್ದಲ್ಲಿ ಸದರಿ ಮರದ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟುಮೆಂಟನ್ನು ಈ ಲಾಗಾಯಿತು ಒಂದು ತಿಂಗಳೊಳಗಾಗಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ಹಾಜರ್ಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ಮರದ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರಕಾರಕ್ಕೆ ವಳಪಡಿಸಿಕೊಳ್ಳುವದು.

2. ಸದರಿ ನಾಟುವನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆ ಮುತ್ತು ಭದ್ರಪಡಿಸಿದ್ದಕ್ಕೆ ತಗಲಿದ ಖರ್ಚವಡನ್ನು ಫಾರೆಸ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ :—

ನಂಬರು.	ಯಾವ ಜಾತಿ ನಾಟು.	ತೊಲೆ ವಿವರ.	ಲಾಂಬಿ.	ಸುತ್ತು	ಸಲೆ ಅಡಿ.
1	ಕ್ರೀಶ್ಚನ್ನೆ ನಾಟೂ .	ದುಂಡು ನಾಟಾ, ಯಾವವಿಧವಾದ ಕಾಂಗಾರಿಯು ನಡದ್ದಿಲ್ಲ ಮತ್ತು ನಂಬರು ವಗ್ಯೆರೆ ನಮೂದಿಲ್ಲ. ಸೊಳ್ಳೆಬೈಲ್ ಹತ್ತರ ಮಕ್ತಿಕೊಪ್ಪ ಗ್ರಾಮದಲ್ಲಿ ಬಿದ್ದಿರುತ್ತ.	45 ಅಡಿ	6′—3″	104

ಇಸ್ತಿಹಾರ್.

ತಾರೀಖು 7ನೆ ಜುಲೈ 1904.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಡಿಸ್ಟ್ರಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕ್‌ಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ರೈವೇಟೇರ್ಪಡಗಳು ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಳ್ಳಿ ಚಕ್ಕೆ ಯನ್ನು 1904ನೆ ಇಸವಿ ಜುಲೈ ಗುರ್ಯೇ ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಾಗುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕ್ ಅಮಲ್ದಾರ್ರಿಂದ ರೇಂಜರುಗಳೊಡನೆ ಹರಾಜು ಮಾಡಿಸುತ್ತ :—

ನಂ.	ತಾಲ್ಲೂಕ್ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
1	ಚಿಕ್ಕಮಗಳೂರು .	8—8—1904	ತಾಲ್ಲೂಕ್ ಕಛೇರಿ.
2	ಕಡೂರು ..	10—8—1904	ಕಡೂರು ತಾಲ್ಲೂಕ್ ಕಛೇರಿ.
3	ತರೀಕೆರೆ ..	12—8—1904	ತರೀಕೆರೆ ತಾಲ್ಲೂಕ್ ಕಛೇರಿ.

ನೋಟ್—ಈ ಹರಾಜು ಅವಶ್ಯಕ ಕಂಡುಬಂದರೆ ಸಮ್ಮತುವಾರ್ ಮಾಡಿಸಲ್ಪಡುತ್ತದೆ.

2. ಹರಾಜು ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಪ್ರಾರಂಭವಾಗುತ್ತೆ.

3. ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ವಹಿಸಿದ ಏಜಂಟರ ಮುಖಾಂತ್ರವಾಗಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡ್ಲೆ ಜಡಸವಾಲ್‌ದಾರನು ನಗದಾಗಿಯಾಗಲಿ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರ ಹೆಸರಿಗೆ ಇಂಡಾರ್ಸು ಮಾಡಲ್ಪಟ್ಟ ಪ್ರಾಮಿಸರಿ ನೋಟ್ ಮೂಲಕವಾಗಲಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ ರೂಪಾಯಿಗೆ ಒಂದಾಣೆ ಮೇರೆಗೆ ಶೇಕಡಿ ಒಟ್ಟು ಹಣದಲ್ಲಿ ಹತ್ತನೇ ಒಂದು ಭಾಗ ಮೊಬಲಗನ್ನು ಡಿಪಾಜಿಟ್ ಹಾಜರ್ಪಡಿಸಬೇಕು. ಹಾಗೆ ಕೊಡಲು ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನು ಪುನಃ ಹರಾಜು ಮಾಡುತ್ತ.

6. ಮೇಲೆ ಹೇಳಿದಂತೆ ದುಸರಾ ಹರಾಜು ಮಾಡುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಅವನಿಗೆ ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಹಕ್ಕೇನು ಇರುವದಿಲ್ಲ. ನಷ್ಟಬಂದರೆ ಅವ್ವಲ್ ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಮೊಬಲಗಿಗೂ ಇರುವ ಕಮ್ಮಿ ಮೊಬಲಗು ಅವಲ್ ಹರಾಜುದಾರನಿಂದ ರೆವಿನ್ಯೂ ಡಿವ್ಯಾಂಡಿನಂತೆ ವಸೂಲ್ಮಾತಲ್ಪಡುವದು.

7. ಚಡ ಸವಾಲ್ದಾರನು ಹರಾಜು ಮೊಬಲಗನ್ನೂ ಮತ್ತು ಅದರ ಲೋಕಲ್ ಸೆಸ್ಸನ್ನೂ ಮುಂಗಡವಾಗಿ ನಾಲ್ಕು ಸಮವಾದ ಪೂಹೇವಾರಿ ಖಿಸ್ತಿನಲ್ಲಿ ಈ ಕೆಳಗೆ ನಮೂದಿಸಿ ಇರುವ ತಾರೀಖಿನಲ್ಲಿ ಸರಕಾರಕ್ಕೆ ಪಾವತೀ ಮಾಡಬೇಕು. ಈ ಪ್ರಕಾರ ಯಾವ ಖಿಸ್ತೇ ಆಗಲಿ ಪಾವತಿ ಮಾಡದೇ ತಪ್ಪಿದರೆ ಮೊದಲು ಡಿಪಾಜಿಟ್ ಇಟ್ಟ ಮೊಬಲಗು ಸರ್ಕಾರಕ್ಕೆ ಕೇರಿಸಲ್ಪಡುತ್ತೆ. ಅಲ್ಲದೆ ಮುಂದೆ ಚಕ್ಕೆ ಜಮಾಯಿಸಿಕೊಳ್ಳುವದಕ್ಕೆ ಇಜಾರೆ ಹಕ್ಕು ಸಹಾ ತಪ್ಪಿಹೋಗುತ್ತೆ. ಬಾಕಿ ಏನಾದರೂ ಮೊಬಲಗು ನಿಂತರೆ ರವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಲ್ಪಡುತ್ತೆ.

1ನೆ ಖಿಸ್ತು	31—8—1904	3ನೆ ಖಿಸ್ತು	31—10—1904
2ನೆ ಖಿಸ್ತು	30—9—1904	4ನೆ ಖಿಸ್ತು	30—10—1904

ಹರಾಜುದಾರನು ತನ್ನ ಇಜಾರೆ ಷರತ್ತು ಮೇರೆ ನಡಿಯುವದಕ್ಕೋಸ್ಕರ ಸೆಕ್ಯೂರಿಟಿಗಾಗಿ 5ನೆ ಪ್ಯಾರಾದಲ್ಲಿ ವಿಧಿಸಿದ ಡಿಪಾಜಿಟ್ ಮೊಬಲಗನ್ನು ಸರ್ಕಾರದಲ್ಲಿಯೇ ನಿಲ್ಲಿಸಿಕೊಳ್ಳಲ್ಪಡುತ್ತೆ.

8. ಹರಾಜು ಮಂಜೂರಿಯನ್ನು ಹರಾಜುದಾರನಿಗೆ ತಿಳಿಸಿದ (3) ದಿವಸಗಳ ವಳಗಾಗಿ ಸರಿಯಾದ ಛಾಪಾಕಾಗದ್ದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತ್ತುಗಳ ಮೇರೆ ನಡಿಪುಕೊಳ್ಳಲು ಬದ್ಧನಾಗಿ ಇರುವದಕ್ಕೆ ಮುಚ್ಚಳಿಕೆ ಬರದು ರುಜು ಮಾಡಿಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳ ಮೇರೆ ಹರಾಜುದಾರನು ನಡಿದುಕೊಳ್ಳಬೇಕು.

(1) ಒಂದು ವರುಷಕ್ಕೆ ಒಳಪಟ್ಟ ಗಿಡಗಳನ್ನು ಕಡಿಯಕೂಡದು.

(2) ತೊಬಟೆ ತೆಗದ ಕಡ್ಡಿಗಳು ಇಜಾರೆದಾರನದಾಗಿರತಕ್ಕದ್ದು.

(3) ಇಜಾರೆ ಮೇರೆ ಸಾಗಿಸಿಕೊಂಡ ಚಕ್ಕೆ ಮೊತ್ತದ ತಪಸೀಲ್ ಲೆಖ್ಖ ಇಡಬೇಕು. ತಾಲ್ಲೂಕ ಅಮಲ್ದಾರ್ರು ಅಥವಾ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಖ್ಖ ತನಿಖೇ ಮಾಡಲು ಬಂದಾಗ ಲೆಖ್ಖ ತೋರಿಸಬೇಕು.

(4) ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸ್ ಪಡಿಯಬೇಕು.

(5) 1905ನೆ ಇಸವಿ ಜೂನ್ ಆಖೈರು ವಳಗಾಗಿ ಕಡದು ಜಮಾಯಿಸಿ ಇಟ್ಟುಕೊಂಡಿರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕ ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲಿ ತಪ್ಪಿ ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೇ ಸಾಗಿಸದೆ ನಿಂತಿರುವ ಚಕ್ಕೆ ವಿಸ್ಪಟ್ಟವೂ ಸರ್ಕಾರಕ್ಕೆ ಕೇರಿಸಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ ಸಾದೆ ಬಗ್ಯಾಗಲೀ ಅಥವಾ ಇನ್ಯಾವದ ಕ್ಕಾಗಿಯಾಗಲಿ ಕಡಿಯಕೂಡದು.

ಎಂ. ಜಿ. ರಾವುರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ತಾರೀಖು 5ನೆ ಮಾಹೆ ಜುಲೈ 1904.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲ್ಲೂಕು ಏನಹಾ ಬಾಕೀ ಎಲ್ಲಾ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟ್ ಡಿಸ್ಟ್ರಿಕ್ಟ್ ಜಂಗಲುಗಳು ಮತ್ತು ಎಲ್ಲಾ ಸರ್ಕಾರೀ ಬಂಜರು ಜಮೀನುಗಳಲ್ಲಿ ದೊರಿಯುವ ಫಾರೆಸ್ಟ್ ಪಸಾರೆ ಜಿನಸಿಗಳನ್ನು 1903—04ನೆ ಸಾಲಿಗೆ ಜಮಾಯಿಸಿ ತೆಗದುಕೊಂಡು ಹೋಗುವ ಹಕ್ಕನ್ನು ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಬಹಿರಂಗವಾಗಿ ತಾಲ್ಲೂಕುವಾರಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ರೇಂಜಾಫಿಸರವರು ಮತ್ತು ಆಯಾಯ ತಾಲ್ಲೂಕು ಅಮಲ್ದಾರ್ರವರೊಂದಿಗೆ ಈ ಕೆಳಗೆ ವಿವರಿಸಿರುವ ಮೇರೆ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿ ಹರಾಜ್ ಮಾಡಿಸಲಾಗುತ್ತೆ.

ತಾಲ್ಲೂಕು.	ಹರಾಜು ತಾರೀಖು.
1. ಮಂಜರಾಬಾದ್	2—8—04
2. ಜೇಲೂರು	5—8—04
3. ಹಾಸನ—ಆಲೂರು ಸಬ್ ತಾಲ್ಲೂಕು ದೇವಿಲ್.	9—8—04
4. ಹೊಳೇನರಸೀಪುರ	15—8—04
5. ಅರ್ಕಲಗೂಡು	17—8—04
6. ಚನ್ನರಾಯಪಟ್ಟಣ	20—8—04

2. ಚಡ ದರಖಾಸ್ತುದಾರನು ಹರಾಜ್ ಖೈದಾದ ಕೂಡ್ಲೆಯೇ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಠೇವಣಿಯಾಗಿ ಹಾಜರ್ಮಾಡಬೇಕು. ಅಲ್ಲದೆ ಬಾಕಿ ವ್ಯೆಯುವ ಮೊಬಲಗನ್ನು ಹರಾಜು ಮಂಜೂರಾತಿ ತಿಳಿಸಿದ ಲಾಗಾಯಿತು 15 ದಿವಸದಲ್ಲಿ ಕೊಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ಪುನಹಾ ಹರಾಜು ಮಾಡಲ್ಪಡುವದು. ಮೇಲ್ಕಂಡಂತೆ ನಡೆಸುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಅವಲ್ ಚಡ ದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ.

3. ಹರಾಜ್ ಮೊಬಲಗಿಗೆ ರೂಪಾಯಿಗೆ ಬಂದಾಣೆಯಂತೆ ಲೋಕಲ್ ಸೆಸ್ ದಾಖಲ್ಮಾಡಲಾಗುತ್ತೆ. ಮೇಲ್ಕಂಡಂತೆ ಮುಕ್ಕಾಲು ಹಿಸ್ಸೆ ಮೊಬಲಗನ್ನು ಕೊಡುವದರಲ್ಲಿ ತಪ್ಪುದಾಗ್ಯೂ ಅಥವಾ ಸಾವಕಾಶವಾದಾಗ್ಯೂ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡನಾಗಿ ಸೇರಿಸಿಕೊಳ್ಳುವದರಲ್ಲಿ ಬರುತ್ತೆಯಲ್ಲದೆ ಬಾಕೀ ಉಳಿದ ಮೊಬಲಗನ್ನು ರೆವಿನ್ಯೂ ಕಂದಾಯದ ಬಾಕಿಯಂತೆ ಹರಾಜ್ ದಾರನಿಂದ ವಸೂಲ್ಮಾಡಲ್ಪಡುತ್ತೆ.

4. ಕಂಟ್ರಾಕ್ಟುದಾರನು ಇನಾಂದಾರ್ರುಗಳಿಗೆ ಇರುವ ಯಾವದೊಂದು ಹಕ್ಕಿಗೂ ಕುಂದಕ ಉಂಟುಮಾಡಕೂಡದು.

5. (a) ಎಲ್ಲಾ ಜಿನಸಿಗಳಾಗಲಿ ಅಥವಾ ಯಾವದಾದರೂ ಒಂದಕ್ಕಾಗಲೀ ಜಂಗಲುವಾರ್ ಅಥವಾ ಹೋಬಳಿವಾರ್ ಗುತ್ತಿಗೆ ಕೊಡುವದಕ್ಕೆ ಸಾಕಾಬೆಪ್ಪು ಮುಖ್ಯವಾದ ಕಾರಣವಿದ್ದ ವಿನಹಾ ತಾಲ್ಲೂಕುವಾರಾಗಿಯೇ ಗುತ್ತಿಗ್ಯೆ ಕೊಡಲಾಗುತ್ತೆ.

ಡೆಪ್ಯುಟಿ ಕವಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ಇದರ ಹಕ್ಕನ್ನು ಒಟ್ಟು ಗುತ್ತಿಗೇದಾರ್ರು ಇತರರಿಗೆ ಕೊಡಕೂಡದು.

(b) ಜವಾಬಣೆ ಕೆಲಸದಲ್ಲಿ ವಿಜಂಟರು ಅಥವಾ ನೌಕರರು ನಡೆಸುವ ಕೃತ್ಯಗಳಿಗೆ ಇಜಾರೇದಾರ್ರಾಗಲಿ ಅಥವಾ ಸಬ್ ಇಜಾರೇದಾರ್ರೇ ಆಗಲಿ ಖುದ್ದು ಜವಾಬ್ದಾರರಾಗಿರುತ್ತಾರೆ.

6. ಹರಾಜನ್ನು ಯಾವದೊಂದು ಕಾರಣವೂ ನಮೂದಿಸದೆ ವಜಾಮಾಡುವ ಅಥವಾ ತಿರಸ್ಕರಿಸುವ ಬಗ್ಯೆ ಡೆಪ್ಯುಟಿ ಕವಿಷನರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. 1904ನೆ ಆಗಸ್ಟು ಮಾಹಯಲ್ಲಿ ಹರಾಜ್ ಆಗತಕ್ಕ ಹಾಸನ ಡಿಸ್ಟ್ರಿಕ್ಟಿನ ಪಸಾರೆ ಜಿನಸಿಗಳ ಪಟ್ಟಿಯನ್ನು ಈ ಕೆಳಗೆ ಕಾಣಿಸಿರುತ್ತೆ.

ಪಸಾರೆ ಜಿನಸಿಗಳ ಹೆಸರು.

ಸಂಖ್ಯೆ.	ಜಿನಸಿಗಳ ಹೆಸರು.	ಸಂಖ್ಯೆ.	ಜಿನಸಿಗಳ ಹೆಸರು.
1	ಜೇನುಮೇಣ	14	ಹುರುಗಲು ಬೀಜ
2	ಅಳಲೇಕಾಯಿ	15	ಜೇಲದಹಣ್ಣು
3	ಸೀಗೇಕಾಯಿ	16	ವಾಟೇಹುಳಿ
4	ಗೇರುಬೀಜ	17	ದಾಲಚಿನ್ನಿ
5	ಗೋಂದು	18	ಬೆಂಡೇನಾರು
6	ಹೊಂಗೇಬೀಜ	19	ಕಾಡುಹಿಪ್ಪೇಬೀಜ
7	ಕಾಡಚಕ್ಕೊಟೆಬೀಜ	20	ಬೂರುಗದ ಹತ್ತಿ
8	ಅಂಟುವಾಳದಕಾಯಿ	21	ತಾರೇಕಾಯಿ
9	ಕಕ್ಕೇಕಾಯಿ	22	ಕಪಿಲಾರಂಗು
10	ಗುರ್ಗೆಹರಳು	23	ಬೆಂಡು
11	ಕಾಡಹರಳು	24	ಬಳಪಿನ ಕಲ್ಲು
12	ನಸ್ಯಾಣಿಬೊಗ್ಗು	25	ರಾಮಪತ್ರೆ—ರಾಮಗೋಟು
13	ಹಾಲಮಡ್ಡಿ		

ವೈ. ಸೀತಾರಾಮಯ್ಯ,
ಛಾರ್ ಡೆಪ್ಯುಟಿ ಕವಿಷನರ್, ಹಾಸನದ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಕೋಲಾರ ಗೋಲ್ಡ್ ಫೀಲ್ಡ್ಸಿಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಕೋಲಾರ ತಾಲ್ಲೂಕು ಜೋಡಿ ಹೊಳಲಿ ಕೆರೆ ನೀರನ್ನ ಸಾಗುವಳಿಗೆ ಬಿಡದೆ ಅಮಾನತ್ತು ಮಾಡಿದ ಸಬಬು ಸದರಿ ಗ್ರಾಮದ ತರೀ ಮತ್ತು ಬಾಗಾಯತು ಜಮೀನುಗಳನ್ನ ಸರ್ಕಾರಕ್ಕೆ ತೆಗದುಕೊಳ್ಳಲ್ಪಡುತ್ತೆ. ಅವುಗಳಲ್ಲಿ ಹಕ್ಕು ಬಾಧ್ಯತೆಯುಳ್ಳ ವಿಸಿಷ್ಟ ಜೋಡಿ ಹಿಸ್ಸೇದಾರರು 15—7—04 ರಲ್ಲು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕವಿಷನರ್ ಸಾಹೇಬರವರ ರೂಬರೂ ತನಿಬಿ ಬಗ್ಯೆ ಛಾಂಪಿಯರ್ ರೀಫ್ಸ್ ವೊಕ್ಕಾಂನಲ್ಲಿ ಹಾಜರಾಗಬೇಕು.

ಈ ವಿಷಯದಲ್ಲಿ ಹೆಚ್ಚಿಗೆ ತಕ್ಯೀಲಿಗಳ ಬಗ್ಯೆ 23—6—04ನೆ ಮಾರ್ಚಂ ಮೈಸೂರು ಗೆಜೆಟ್ 2ನೆ ಭಾಗದ 388—390ನೆ ಪುಟದಲ್ಲಿ ಛಾಯಿಷಾಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ತಾರೀಖು 22ನೆ ಜೂ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಮೂಲೂರು ತಾಲ್ಲೂಕಿಗೆ ಸೇರಿದ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 12ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ದೊಮ್ಮಲೂರು—ಲಕ್ಕೂರು ಹೋಬಳಿ.
2. ಜಹಗೀರುಪುರ—ಮೂಲೂರು ಹೋಬಳಿ.
3. ಜಹಗೀರು ಯರ್ರಪ್ಪನಹಳ್ಳಿ—ಮೂಲೂರು ಹೋಬಳಿ.

(ಹೆಚ್ಚು ತಫಶೀಲ್ ಬಗ್ಯೆ ತಾರೀಖು 7—7—1904ನೆ ಮಾರ್ಚಂ 27ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 418—419—420ನೆ ನಂಬರ್ ಪೇಜುಗಳು ನೋಡತಕ್ಕದ್ದು.)